| | | |
|---|---|---|
| ಅಭ್ಯಾಸ ಪತ್ರಿಕೆಯ ಸಂಖ್ಯೆ : WT_7S_4.5_DSERT | | ಕರ್ನಾಟಕ ಮಂಡಳಿ |
| **ತರಗತಿ : 7** | **ವಿಷಯ : ವಿಜ್ಞಾನ** | **ದಿನಾಂಕ : 17/07/2021** |
| **ಘಟಕದ ಕ್ರಮ ಸಂಖ್ಯೆ ಹಾಗು ಹೆಸರು : 4, ಉಷ್ಣ** | | |
| **ಉಪ ಘಟಕ : 4.5: ಬೇಸಿಗೆ ಮತ್ತು ಚಳಿಗಾಲದಲ್ಲಿ ನಾವು ಧರಿಸುವ ಬಟ್ಟೆಯ ವಿಧಗಳು** | | |

## ವಿಭಾಗ - 1

| | |
|---|---|
| ಪ್ರಶ್ನೆಗಳು | ಈ ಹೇಳಿಕೆಗಳು ಸರಿಯಾಗಿದ್ದರೆ '✔'ಎಂದು ಮತ್ತು ತಪ್ಪಾಗಿದ್ದರೆ 'X' ಎಂದು ಗುರುತ ಹಾಕಿ. |
| ಪ್ರಶ್ನೆ 1a | ಬೇಸಿಗೆಯಲ್ಲಿ ದಟ್ಟವಾದ ಬಣ್ಣದ ಬಟ್ಟೆಗಳನ್ನು ಧರಿಸಲು ಇಷ್ಟಪಡುತ್ತೇವೆ. |
| ಉತ್ತರ | X |
| | |
| 1b | ತಿಳಿ ಬಣ್ಣದ ಮೇಲ್ಮೈಗಳು ಉಷ್ಣವನ್ನು ಹೀರಿಕೊಳ್ಳುತ್ತವೆ. |
| ಉತ್ತರ | X |
| | |
| ಪ್ರಶ್ನೆ 2 | ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.<br>ಈ ಯಾವ ಹೇಳಿಕೆಯು ಸರಿಯಿಲ್ಲ?<br>a) ಚಳಿಗಾಲದಲ್ಲಿ ಉಣ್ಣೆಯ ಬಟ್ಟೆಗಳು ನಮ್ಮನ್ನು ಬೆಚ್ಚಗೆ ಇರಿಸುತ್ತವೆ.<br>b) ಸ್ಥಳವನ್ನು ಬೆಚ್ಚಗಾಗಿರಿಸಲು ಅಥವಾ ತಂಪಾಗಿಡಲು ನಾವು ವಿದ್ಯುತ್ ಕಟ್ಟಿಗೆ ಮತ್ತು ಕಲ್ಲಿದ್ದಲಿನಂತಹ ಇಂದನಗಳನ್ನು ಬಳಸುತ್ತೇವೆ.<br>c) ಕಟ್ಟಡದ ಹೊರಗೋಡೆಗಳು ಗಾಳಿಯ ಪದರಗಳನ್ನು ಹಿಡಿದಿಟ್ಟುಕೊಳ್ಳುವಂತೆ ನಿರ್ಮಿಸಬಾರದು. |

| | |
|---|---|
| | d) ಟೊಳ್ಳಾದ ಇಟ್ಟಿಗೆಗಳನ್ನು ಉಷ್ಣದಿಂದ ರಕ್ಷಣೆ ಪಡೆಯಲು ಬಳಸಬಹುದು. |
| ಉತ್ತರ | c) ಕಟ್ಟಡದ ಹೊರಗೋಡೆಗಳು ಗಾಳಿಯ ಪದರಗಳನ್ನು ಹಿಡಿದಿಟ್ಟುಕೊಳ್ಳುವಂತೆ ನಿರ್ಮಿಸಬಾರದು. |
| | |
| ಪ್ರಶ್ನೆ 3 | ಬಿಟ್ಟ ಸ್ಥಳಗಳನ್ನು ತುಂಬಿಸಿ.<br>ಉಣ್ಣೆಯು ಉಷ್ಣದ ______________ ವಾಹಕವಾಗಿದೆ |
| ಉತ್ತರ | ಉಣ್ಣೆಯು ಉಷ್ಣದ ಅಲ್ಪ ವಾಹಕವಾಗಿದೆ. |
| | |
| ವಿಭಾಗ - 2 | |
| ಪ್ರಶ್ನೆ 4 | ಬೇಸಿಗೆಯಲ್ಲಿ ಬಳಸುವ ವಸ್ತುಗಳ ಪಕ್ಕ 'ಬೇಸಿಗೆ' ಎಂದು ಮತ್ತು ಚಳಿಗಾಲದಲ್ಲಿ ಬಳಸುವ ವಸ್ತುಗಳ ಪಕ್ಕ 'ಚಳಿಗಾಲ' ಎಂದು ಬರೆಯಿರಿ.<br>a) ಕಂಬಳಿ -<br>b) ಹತ್ತಿಯ ಬಟ್ಟೆ -<br>c) ಬಿಳಿ ಬಣ್ಣದ ಫ್ರಾಕ್ -<br>d) ಕಾರ್ಪೆಟ್ - |
| ಉತ್ತರ | a) ಕಂಬಳಿ - ಚಳಿಗಾಲ<br>b) ಹತ್ತಿಯ ಬಟ್ಟೆ - ಬೇಸಿಗೆ<br>c) ಬಿಳಿ ಬಣ್ಣದ ಫ್ರಾಕ್ - ಬೇಸಿಗೆ<br>d) ಕಾರ್ಪೆಟ್ - ಚಳಿಗಾಲ |
| | |
| ಪ್ರಶ್ನೆ 5 | ಈ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.<br>ದಟ್ಟವಾದ ಬಣ್ಣದ ಬಟ್ಟೆಗಳು ಮತ್ತು ತಿಳಿ ಬಣ್ಣದ ಬಟ್ಟೆಗಳ ನಡುವಿನ ವ್ಯತ್ಯಾಸವೇನು? |

| | |
|---|---|
| ಉತ್ತರ | ದಟ್ಟವಾದ ಬಣ್ಣದ ಬಟ್ಟೆಗಳನ್ನು ನಾವು ಚಳಿಗಾಲದಲ್ಲಿ ಉಪಯೊಗಿಸುತ್ತೇವೆ. ದಟ್ಟವಾದ ಬಣ್ಣದ ಮೇಲ್ಮೈಗಳು ಹೆಚ್ಚು ಉಷ್ಣವನ್ನು ಹೀರಿಕೊಳ್ಳುತ್ತವೆ. ಇವು ದೇಹ/ ವಸ್ತುವನ್ನು ಬೆಚ್ಚಗಿಡುತ್ತವೆ.<br><br>ತಿಳಿ ಬಣ್ಣದ ಬಟ್ಟೆಗಳನ್ನು ನಾವು ಬೇಸಿಗೆಗಾಲದಲ್ಲಿ ಉಪಯೊಗಿಸುತ್ತೇವೆ. ತಿಳಿ ಬಣ್ಣ ತಮ್ಮ ಮೇಲೆ ಬೀಳುವ ಉಷ್ಣವನ್ನು ಪ್ರತಿಪಲಿಸುತ್ತದೆ. ಇವು ದೇಹ/ ವಸ್ತುವನ್ನು ತಂಪಾಗಿರಿಸುತ್ತದೆ. |
| | |
| ವಿಭಾಗ - 3 | |
| ಪ್ರಶ್ನೆ 6 | ವಿವಿಧ  ಋತುಮಾನಗಳಲ್ಲಿ ನೀವು ಧರಿಸುವ ವಿವಿಧ ಬಟ್ಟೆಗಳನ್ನು ಪಟ್ಟಿ ಮಾಡಿ. |
| ಉತ್ತರ | |

| ಮಳೆಗಾಲ | ಚಳಿಗಾಲ | ಬೇಸಿಗೆಗಾಲ | ವಸಂತಗಾಲ |
|---|---|---|---|
| ಬೂಟು | ಉಣ್ಣೆಯ ಬಟ್ಟೆ | ಹತ್ತಿಯ ಬಟ್ಟೆ | ಹತ್ತಿ ಮತ್ತು ಉಣ್ಣೆಯ ಬಟ್ಟೆ |
| ಕೊಟು | ಕಂಬಳಿ | ಬಿಳಿ ಬಣ್ಣದ ಫ್ರಾಕ್ | ಕಂಬಳಿ |
| ಕಾರ್ಪೆಟ್ | ಕಾರ್ಪೆಟ್ | ಹತ್ತಿಯ ಲುಂಗಿ | ಕಾರ್ಪೆಟ್ |
| ಕಂಬಳಿ | ಕಾಲುಚೀಲ | ಲಂಗ | ಕಾಲುಚೀಲ |
| ಕಾಲುಚೀಲ | ಕೈಚೀಲ | ಸೀರೆ | ಕೈಚೀಲ |

| | |
|---|---|
| ಪ್ರಶ್ನೆ 7 | ಚಳಿಗಾಲದಲ್ಲಿ ಹೊದ್ದಿಕೊಳ್ಳಲು ನಿಮಗೆ ಒಂದು ದಪ್ಪ ಕಂಬಳಿ ಅಥವಾ ಎರಡು ತೆಳುವಾದ ಕಂಬಳಿಗಳನ್ನು ಜೊಡಿಸಿ ನೀಡಿದರೆ ನೀವು ಯಾವುದನ್ನು ಆಯ್ಕೆ ಮಾಡುವಿರಿ? ಏಕೆ? |
| ಉತ್ತರ | ಚಳಿಗಾಲದಲ್ಲಿ ಹೊದ್ದಿಕೊಳ್ಳಲು ಎರಡು ತೆಳುವಾದ ಕಂಬಳಿಗಳನ್ನು ಆಯ್ಕೆ ಮಾಡುತ್ತೇವೆ. ಕಾರಣ ಕಂಬಳಿ/ ಉಣ್ಣೆ ಅಲ್ಪ ಉಷ್ಣವಾಹಕವಾಗಿದೆ, ಉಣ್ಣೆಯ ಎಳೆಗಳ ನಡುವೆ ಹಿಡಿದಿಲ್ಪಟ್ಟ ಗಾಳಿಯು ನಮ್ಮ ದೇಹದಿಂದ ಸುತ್ತಮುತ್ತಲಿನ ಪ್ರದೇಶಕ್ಕೆ ಉಷ್ಣದ ವರ್ಗಾವಣೆಯನ್ನು ತಡೆಯುತ್ತದೆ. ಇದರಿಂದಾಗಿ ಎರಡು ತೆಳುವಾದ ಕಂಬಳಿ ಅತಿ ಬೆಚ್ಚನೆಯ ಅನುಭವ ನೀಡುತ್ತದೆ. |
| | |